ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 206 ರನ್ವಯ ಶಾಸನಬದ್ಧ ಅನುದಾನದಲ್ಲಿ ಪ್ರಥಮವಾಗಿ ವಿದ್ಯುತ್ ಶುಲ್ಕ ಸೇರಿದಂತೆ ಸರ್ಕಾರದ ಶುಲ್ಕಗಳನ್ನು ಪಾವತಿ ಮಾಡಬೇಕಾಗಿರುತ್ತದೆ. ಪ್ರತಿ ಗ್ರಾಮ ಪಂಚಾಯಿತಿಗೆ ವಿವಿಧ ಯೋಜನೆಗಳಡಿ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಸುಮಾರು ರೂ.35 ಲಕ್ಷಗಳ ಅನುದಾನವನ್ನು ನೀಡುತ್ತಿರುವುದರಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗುತ್ತಿಲ್ಲ.

ಇ) ಇದನ್ನು ತಪ್ಪಿಸಲು ರೈತರು ಕೃಷಿ ಪಂಪು ಸೆಟ್ಟುಗಳಿಗೆ ವಿಧಿಸುತ್ತಿರುವ ಪ್ರತಿ ಯೂನಿಟ್‌ಗೆ ಐವತ್ತು ಪೈಸೆಯಂತೆ ಶುಲ್ಕ ವಿಧಿಸುತ್ತಿರುವ ರೀತಿಯಲ್ಲಿ ಕುಡಿಯುವ ನೀರಿನ ಪಂಪುಸೆಟ್‌ಗಳಿಗೂ ಇದೇ ನಿಯಮವನ್ನು ಅನುಸರಿಸಲು ಸರ್ಕಾರದಿಂದ ಸಾಧ್ಯವೇ?

ಇಂತಹ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಮುಂದೆ ಇರುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (423)331
ಸದಸ್ಯರ ಹೆಸರು : ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್.
ಉತ್ತರಿಸಬೇಕಾದ ಸಚಿವರು : (ಶ್ರೀ ಅರವಿಂದ ಲಿಂಬಾವಳಿ)
ಉನ್ನತ ಶಿಕ್ಷಣ ಸಚಿವರು

ಅ) ಗೌರಿಬಿದನೂರು ತಾಲ್ಲೂಕಿನ ಹೋಬಳಿ ಕೇಂದ್ರಗಳಾದ ಮಂಚೇನಹಳ್ಳಿ, ಕಸಬಾ, ತೊಂಡೇ ಬಾವಿ ಹೋಬಳಿಗಳಿಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಇಲ್ಲದೇ ಇರುವುದು ನಿಜವೇ;

ಹೌದು

ಆ) ಇಲ್ಲಿನ ವಿದ್ಯಾರ್ಥಿಗಳಿಗೆ ಪ್ರಥಮ ದರ್ಜೆ ಕಾಲೇಜುಗಳು ಇಲ್ಲದೇ ವಿದ್ಯಾರ್ಥಿಗಳು 15–20 ಕಿ.ಮೀ.ದೂರದ ಗ್ರಾಮಗಳಿಗೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಸರ್ಕಾರದ ಗಮನಕ್ಕೆ ಬಂದಿಲ್ಲ.

ಇ) ಈ ಭಾಗಗಳಲ್ಲಿ ಸರ್ಕಾರವು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಹೊಸದಾಗಿ ಮಂಜೂರು ಮಾಡಿ ಈ ಭಾಗದ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಲಾಗುವುದೇ?

ಅಂತಹ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಮುಂದೆ ಇರುವುದಿಲ್ಲ.

1. ಸದಸ್ಯರ ಹೆಸರು : ಶ್ರೀಶಿವಶಂಕರ ರೆಡ್ಡಿ.ಎನ್.ಹೆಚ್.
(ಗೌರಿಬಿದನೂರು)
2. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (424)332
3. ಉತ್ತರಿಸುವ ಸಚಿವರು : (ಶ್ರೀ ಶೋಭಾ ಕರಂದ್ಲಾಜೆ)